| | | |
|---|---|---|
| ಓ ಎಸ್ | 83/2017 | ಪಿ.ಡಬ್ಲ್ಯೂ: 1 |

ಇಂದು ದಿಃ 4/10/2021 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಃ ಶ್ರೀ ಕುಮಾರ್ ವಕೀಲರಿಂದಃ

ನಿ ಪಿ 12 ರಲ್ಲಿರುವ ಬೀರಮ್ಮ ಎಂದರೆ ನನ್ನ ದೊಡ್ಡ ಅಕ್ಕ ದೊಡ್ಡೆಣ್ಣಮ್ಮ. ನನ್ನ ಹೆಸರು ಚಿಕ್ಕಣ್ಣಮ್ಮ ಹಾಗು ನನಗೆ ರುವ ಇನ್ನೊಂದು ಹೆಸರು ಹೂವಮ್ಮ. ನನ್ನ ಇನ್ನೊಬ್ಬಳು ಅಕ್ಕ ಚಿಕ್ಕಮಸಣಮ್ಮ ರವರ ಇನ್ನೊಂದು ಹೆಸರು ರಾಮಮ್ಮ.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ-

ಆರೀತಿ ಬೀರಮ್ಮ ಹಾಗು ದೊಡ್ಡೆಣ್ಣಮ್ಮ ಒಬ್ಬರೇ ವ್ಯಕ್ತಿಯ ಹೆಸರು ಎಂದು ಸುಳ್ಳು ಹೇಳುತ್ತಿರುವುದು ಎಂದರೆ ಸರಿಯಲ್ಲ. ದಾಖಲೆಯಲ್ಲಿರುವ ಹೆಸರು ತಾಳೆಯಾಗುವುದಿಲ್ಲ ಎಂದು ಅರಿತುಕೊಂಡು ಹೇಗಾದರೂ ಸಂಬಂಧಕಲ್ಪಿಸಲು ಆರೀತಿ ಸುಳ್ಳು ಹೇಳುತ್ತಿರುವುದು ಎಂದರೆ ಸರಿಯಲ್ಲ. ನನಗೆ ಹೋವಮ್ಮ ಎಂದು ಹೆಸರು ಇದೆ ಎಂದು ಸುಳ್ಳು ಹೇಳುತ್ತಿರುವುದು ಎಂದರೆ ಸರಿಯಲ್ಲ. ಚಿಕ್ಕಮಸಣಮ್ಮ ರವರನ್ನು ರಾಮಮ್ಮ ಎಂದು ಕರೆಯುತ್ತಿದ್ದರು ಎಂದು ಸುಳ್ಳು ಹೇಳುತ್ತಿರುವುದು ಎಂದರೆ ಸರಿಯಲ್ಲ. ನಿ ಪಿ 12 ಮತ್ತು 13 ರಲ್ಲಿ ನನ್ನ ಅಥವ ನನ್ನ ಸಹೋದರ ಸಹೋದರಿಯರ ಹೆಸರು ಇಲ್ಲ ಎಂದರೆ ಸರಿಯಲ್ಲ. ನಿ ಪಿ 12 ಮತ್ತು 13 ಯಾರ ದಾಖಲೆ ಎಂದು ಕೇಳಿದರೆ ನನ್ನ ತಂದೆಯ ದಾಖಲೆ ಎಂದು ನುಡಿಯುತ್ತೇನೆ. ನಾನು ಕೊಟ್ಟಿರುವ ವಂಶವೃಕ್ಷದಲ್ಲಿ ದಾವೆಯಲ್ಲಿ ಹೇಳಿರುವ ಪಕ್ಷಗಾರರ ಹೆಸರಿಲ್ಲ ಎಂದರೆ ಸರಿಯಲ್ಲ. ನಿ ಪಿ 12 ಮತ್ತು 13 ರಲ್ಲಿ ಕಾಣಿಸಿರುವ ಸ ನಂಬರ್ ಗಳಿಗೂ ಹಾಗು ದಾವಾ ಐಟಂ ನಂ.1 ಸ್ವತ್ತಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿ ಪಿ 12 ಮತ್ತು 13 ರಲ್ಲಿ ಕಾಣಿಸಿರುವ ಮಸಣೇಗೌಡ ಬಿನ್ ಮಸಣೇಗೌಡ ಉರುಫ್ ದೊಂದೇಗೌಡ ರವರು ನನ್ನ ತಂದೆಯಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ತಂದೆಯ ಹೆಸರು ದೊಂದೇಗೌಡ ಎಂದು ಮಾತ್ರ ಇರುವುದು ಎಂದರೆ ಸರಿಯಲ್ಲ ಕೆಲವು ಹೆಸರುಗಳು ನಮ್ಮ ಕುಟುಂಬದ ಹೆಸರುಗಳಿಗೆ ತಾಳೆಯಾಗುತ್ತೆ ಎಂದು ನಿ ಪಿ 12 ಮತ್ತು

13 ನ್ನು ತಂದು ಹಾಜರುಪಡಿಸಿರುವುದು ಎಂದರೆ ಸರಿಯಲ್ಲ. ಸದರಿ ದಾಖಲೆಗಳು ನಮ್ಮ ಕುಟುಂಬದವರಿಗೆ ಸಂಬಂಧ ಪಟ್ಟಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತನ್ನು ಹೊಡೆದು ಕೊಳ್ಳಲು ಸುಳ್ಳು ಸಾಕ್ಷಿ ಹೇಳುತ್ತಿರುವುದು ಎಂದರೆ ಸರಿಯಲ್ಲ.

ಮರುವಿಚಾರಣೆ:ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್

ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ., ನಂಜನಗೂಡು.